5/3/2025 15

<u>**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಪಿ. ಹೆಚ್. ಪೂಜಾರ್ ಇವರು ನೀಡಿರುವ ಶೂನ್ಯ ವೇಳೆ ಪ್ರಶ್ನೆಯ ಮೇಲಿನ ಹೇಳಿಕೆ**</u>

<u>**ವಿಷಯ:**</u> ದಿನಾಂಕ: 05.03.2025ರಂದು ಕನ್ನಡ ದಿನಪತ್ರಿಕೆಯೊಂದರಲ್ಲಿ ಪ್ರಕಟಣೆಗೊಂಡಿರುವ "ಪಕ್ಕಾ ಹಣ ಎತ್ತುವ ಯೋಜನೆ! – ಕಾಮಗಾರಿ ಸಂಪೂರ್ಣ ಕಳಪೆ / ಭ್ರಷ್ಟಾಚಾರಕ್ಕೆ ಕೈಗನ್ನಡಿ / ಅಧಿಕಾರಿ – ಗುತ್ತಿಗೆದಾರರ ವಿರುದ್ಧ ಆಕ್ರೋಶ" ಎಂಬ ವಿಜಯಪುರ ಜಿಲ್ಲೆಯ ವಿಶೇಷ ಶೀರ್ಷಿಕೆಯಡಿ ವರದಿಯಾಗಿರುವುದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

<u>**ಹೇಳಿಕೆ:**</u> ವಿಜಯಪುರ ಜಿಲ್ಲೆ, ವಿಜಯಪುರ ತಾಲ್ಲೂಕಿನ ಹೆಗಡಿಹಾಳ ಗ್ರಾಮದಲ್ಲಿ ಜಲ ಜೀವನ್ ಮಿಷನ್‌ನಡಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಅನುಷ್ಠಾನವನ್ನು ಜಲ ಜೀವನ್ ಮಿಷನ್ ಬ್ಯಾಚ-1ರಡಿ ಕೈಗೊಂಡಿದ್ದು, ಇಲಾಖೆಯು ಈ ಮಹತ್ವಕಾಂಕ್ಷೆಯ ಕೇಂದ್ರ ಸರ್ಕಾರದ ಯೋಜನೆಯನ್ನು ಬಾಧ್ಯತೆಯೊಂದಿಗೆ ಕೈಗೆತ್ತಿಕೊಂಡು ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಂಪರ್ಕವನ್ನು ಎಲ್ಲಾ ನಿಯಮಗಳನ್ನು ಅನುಸರಿಸಿಕೊಂಡು ಮುಂದುವರೆಸಲಾಗಿರುತ್ತದೆ.

ಈ ಕಾಮಗಾರಿಗಳನ್ನು ಒಪ್ಪಂದ ಪತ್ರಗಳ ನಿಯಮಾನುಸಾರ ಹಾಗೂ ಅವುಗಳ ಮಾನದಂಡದಲ್ಲಿ ಯಾವುದೇ ಲೋಪವಾಗದಂತೆ ನಿರ್ವಹಿಸಲಾಗುತ್ತಿರುತ್ತದೆ. ಹೆಗಡಿಹಾಳ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 541 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದಂತೆ 541 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ ಈಗಾಗಲೇ, ಮಾನದಂಡದನುಸಾರ ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಅದರಂತೆ ಕತಕನಹಳ್ಳಿ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 590 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಲಾಗಿತ್ತು. ಆದರೆ ಕಾಮಗಾರಿಗೆ ಚಾಲನೆ ಕೊಟ್ಟ ನಂತರ ವಾಸ್ತವಿಕ ಮನೆಗಳ ಸಂಖ್ಯೆಯಂತೆ 673 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ, ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಉಕುಮನಾಳ ಗ್ರಾಮದಲ್ಲಿ ಅಂದಾಜು ಪಟ್ಟಿಯಲ್ಲಿ 260 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದಂತೆ 260 ಕಾರ್ಯಾತ್ಮಕ ನಳಗಳನ್ನು ಪೂರ್ಣಗೊಳಿಸಿ

ಸಾರ್ವಜನಿಕರ ಸಮ್ಮುಖದಲ್ಲಿ ಹರ್ ಘರ್ ಜಲ್ ಎಂದು ಘೋಷಿಸಿ ಈ ನಳಗಳ ಸಂಪರ್ಕ ಜಾಲವನ್ನು ಪಂಚಾಯತಿಗೆ ಹಸ್ತಾಂತರಿಸಿದೆ.

ಹೆಗಡಿಹಾಳ ಎಲ್.ಟಿ. ಜನವಸತಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯಲ್ಲಿ 595 ಕಾರ್ಯಾತ್ಮಕ ನಳಗಳ ಸಂಪರ್ಕ ಯೋಜಿಸಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಹೀಗೆ ಪ್ರತಿ ಹಂತದಲ್ಲಿಯೂ JJM ನಿಯಮಾನುಸಾರ ಕ್ರಮ ಕೈಗೊಂಡು, ಪೈಪ್‌ಗಳನ್ನು CIPET ಸಂಸ್ಥೆಯಿಂದ ಪರೀಕ್ಷಿಸಿ, ಕಾಮಗಾರಿಗಳ ಗುಣ ಪರೀಕ್ಷೆಗಳನ್ನು ಇಲಾಖೆಯಿಂದ ಹಾಗೂ ಮೂರನೇ ಹಂತದ ಏಜೆನ್ಸಿಯಿಂದ ಹಾಗೂ ಸ್ವತಂತ್ರ ಸಂಸ್ಥೆಯಿಂದ ಸಹ ಪರಿಶೀಲನೆ ಹಾಗೂ ಪರೀಕ್ಷೆಗೆ ಒಳಪಡಿಸಿ ಖಚಿತಪಡಿಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ ಕಾಮಗಾರಿ ಪೂರ್ಣಗೊಳ್ಳುತ್ತಿದ್ದಂತೆ ಪೈಪಲೈನ್‌ಗಳನ್ನು ಅಳವಡಿಸುತ್ತಿರುವ ಸಂದರ್ಭದಲ್ಲಿ ಅಗೆತಗೊಳಿಸಲಾದ ಕಾಂಕ್ರೀಟ ರಸ್ತೆಯನ್ನು ಮರು ಕಾಂಕ್ರೀಟಗೊಳಿಸಿ ಜನ ಜಾನುವಾರುಗಳ ಚಲನ ವಲನಕ್ಕೆ ಯಾವುದೇ ಅಡತಡೆಯಾಗದಂತೆ ನೋಡಿಕೊಳ್ಳಲಾಗಿದೆ.

ಮುಂದುವರೆಯುತ್ತಾ, ಇಂಥಹ ಕ್ರಮ ಜರುಗಿಸದಾಗಿಯೂ ಉದ್ಭವಿಸಬಹುದಾದ ಲೋಪಗಳನ್ನು ಕೂಡ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಗ್ರಾಮೀಣ ಮನೆಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿರುತ್ತದೆ.

**(ಪ್ರಿಯಾಂಕ್ ಖರ್ಗೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ**
**ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು**

**ಸಂ:ಗ್ರಾಕುನೀ&ನೈಇ/142/ಮುಇಂ/ತಾಂತ್ರಿಕ/2024-25**